ದತ್ತ ನಾಯ್ಕ ದಂಪತಿಗೆ ಮಕ್ಕಳಾಗದೆ ಕಡೆಗೆ ದತ್ತಾತ್ರೇಯನ ಪೂಜೆ, ವ್ರತ ಮಾಡಿದ ಮೇಲೆ ಪುರು ಹುಟ್ಟಿದ್ದನಂತೆ. ಮಕ್ಕಳಾದರೆ ಶುದ್ಧ ಸಸ್ಯಹಾರಿಯಾಗುವೆನೆಂದು ಮಾಡಿಕೊಂಡ ಹೇಳಾಹೇಳಿಕೆಯಂತೆ ದತ್ತ ನಾಯ್ಕನ ಮನೆಯಲ್ಲಿ ಪುರು ಹುಟ್ಟಿದಾಗಿನಿಂದ ಮೀನು ಮಾಂಸ ಬೇಯುತ್ತಿರಲಿಲ್ಲ. ತನ್ನ ಮನೆಯ ಹೆಸರನ್ನೂ ಕೂಡ ಅವನು 'ಮಾತೃ ವಾತ್ಸಲ್ಯ'ದಿಂದ 'ಶ್ರೀ ದತ್ತಾತ್ರೇಯ ನಿಲಯ' ಎಂದು ಬದಲಾಯಿಸಿಬಿಟ್ಟಿದ್ದ. ದತ್ತ ನಾಯ್ಕ ತನ್ನ ಹೋಟೆಲಿನ ಚಾಕರಿಗೆ ಆಳುಕಾಳುಗಳನ್ನು ಹುಡುಕಿ ಘಟ್ಟದ ಮೇಲೋ, ಕುಂದಾಪುರಕ್ಕೋ ಹೋದಾಗ ಮಾತ್ರ ಕದ್ದು ಮುಚ್ಚಿ ಪುರುವಿನ ಮನೆಯಲ್ಲಿ ಬಾಡೂಟ ತಯಾರಾಗುತ್ತಿತ್ತು. ಇಲ್ಲದಿದ್ದರೆ ಪುರುವಿಗೆ ಶೇಖರನ ಮನೆಯ ಚಿಕನ್ನು ಮಟನ್ನೇ ಗತಿ.

ಪುರು ಹುಟ್ಟಿದ್ದಕ್ಕೂ, ಮನೆಯ ಹೆಸರು ಬದಲಿಸಿದ್ದಕ್ಕೂ ದತ್ತ ನಾಯ್ಕನಿಗೆ ಒಳ್ಳೆಯ ಸಾರಾವಳಿ ಬಂತು. ದತ್ತ ನಾಯ್ಕನ ಅಂಗಡಿಯಲ್ಲಿ ಬರೀ ಬೋಂಡಾಭಾಜಿ ಮಾರಾಟವಷ್ಟೇ ಅಲ್ಲ ಬಟಾಟೆ ಬಜೆ, ಬೇರುಹಲಸಿಕಾಯಿಯ ಫ್ರೈ, ಬದನೆಕಾಯಿ ಬಜೆ, ಜಿಲೇಬಿ, ಅಂಬೋಡೆ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಯಿತು.

ದತ್ತ ನಾಯ್ಕನೋ ಪಕ್ಕಾ ವ್ಯಾಪಾರಿ. ಅರ್ಧಕ್ಕೆ ಅರ್ಧ ಕುಮಟೆ ಪೇಟೆಗೆ ಪ್ಯಾಕೆಟ್ ಹಾಲು ಪುರವಟೆ ಮಾಡುವ ಕುಟ್ಟಪ್ಪನಿಗೆ ಮೆತ್ತಗೆ ಮಾಲೀಶು ಮಾಡಿ, ಪ್ಯಾಕೆಟಿನಿಂದ ಟ್ರೇಯೊಳಗೆ ಅಂದಾದುಂದಿ ಚೆಲ್ಲಿದ ಹಾಲನ್ನು ನೋಡಿ ಪರಿತಪಿಸಿ, 'ಬೆಕ್ಕಿಗೆ ಹೊಟ್ಟೆ ತುಂಬಾ ಹಾಲು ಹೊಯ್ದರೆ ಮನೆಯಲ್ಲಿ ದಾಂಧಲೆ ಕೊಡುವ ಇಲಿಯನ್ನು ಹಿಡಿಯುತ್ತದೆಯೇನೋ ಕುಟ್ಟಪ್ಪಾ?' ಅಂತ ಕೇಳಿ, ಕುಟ್ಟಪ್ಪನ ಮನೆಯ ಬೆಕ್ಕಿನ ಹೊಟ್ಟೆಗೆ ಹೊಡೆದು ಕಡಿಮೆ ಅಂದ್ರೆ ಕಡಿಮೆ ರೇಟಿಗೆ ಟ್ರೇ ತುಂಬ ಚೆಲ್ಲಿದ ಹಾಲನ್ನು ತಾನು ಹಾಕಿಸಿಕೊಂಡು ಕುಟ್ಟಪ್ಪನ ಮನೆಯ ಇಲಿಯನ್ನು ಸದೆಬಡಿಯಲು ದತ್ತ ನಾಯ್ಕ ಪರೋಕ್ಷವಾಗಿ ಕಾರಣನಾಗಿದ್ದ. ಕಡಿಮೆ ರೇಟಿಗೆ ಕೊಂಡ ಹಾಲನ್ನು ಕಸ, ಮಸ ಇರದಂತೆ ಸರಿಯಾಗಿ ಅರಿಸಬೇಕೆಂಬ ಉದ್ದೇಶದಿಂದ ತನ್ನ ಹಳೆಯ ಪಂಜಿಯನ್ನು ಎರಡು ಮಡಿಕೆಯಲ್ಲಿ ಮಡಚಿ ಅರಿಸಿದ ಡಬಲ್ ಫಿಲ್ಟರ್ಡ್ ಹಾಲಿನಿಂದ ಚಹ, ಕಾಫಿ, ಮಕ್ಕಳ ಪ್ರೀತಿಯ 'ಬೋರ್ನ್ವಿಟಾ' ಮಾಡಿ ಮಾರುತ್ತಿದ್ದ.

ಅಪ್ಪ ಹೋಟೆಲು, ಅವ್ವ ಅಡಿಗೆ ಮನೆ ಸೇರಿ ಕೆಲಸದಲ್ಲಿ ಮುಳುಗಿದರೆ ಪುರುವಿಗೆ ಬೇರೆ ಪ್ರಪಂಚವೇ ಇರಲಿಲ್ಲ. ಆಗಲೇ ಪುರುವಿಗೆ ಪಕ್ಕದ ಮನೆಯ ತನಗಿಂತ ವರ್ಷೊಪ್ಪತ್ತು ಹಿರಿಯವನಾದ ಶೇಖರನ ಪರಿಚಯವಾದದ್ದು. ತಣ್ಣೀರನ್ನೂ ತಣಿಸಿ ಕುಡಿಯುವ ಜಾತಿ ಶೇಖರ. ಖರೇ ಹೇಳಬೇಕೆಂದರೆ ಸುಳ್ಳುಪಳ್ಳಿಲ್ಲದ ನಂಬಿಗಸ್ಥ.

ಮೊದಮೊದಲು ಶೇಖರ, ಪುರುವನ್ನು ಒಳಗೆ ಬಿಟ್ಟುಕೊಳ್ಳುತ್ತಲೇ ಇರಲಿಲ್ಲ. ಏನಾದರೊಂದು ನೆಪ ತೆಗೆದು ಮನೆಯಿಂದ ಸಾಗ ಹಾಕುತ್ತಿದ್ದ. ಇಲ್ಲಾ ಶೇಖರನೇ ಜಾಗ ಖಾಲಿ ಮಾಡಿಬಿಡುತ್ತಿದ್ದ. ಒಮ್ಮೊಮ್ಮೆ ಪುರುವಿನಿಂದ ತಪ್ಪಿಸಿಕೊಳ್ಳಲಾಗದೆ ಸಿಕ್ಕಿಬಿದ್ದರೆ 'ತುಗೆಲೆ ಮೂತ್ ಪೀತಾ, ಗೂಖ್ ಖಾತಾ' ಅಂತ ಇಪ್ಪತ್ತೈದು ಬಾರಿ ತಪ್ಪಿಲ್ಲದೆ ಹೇಳುತ್ತಲೇ ಇರು ಎಂದು ಪುರುವನ್ನು ಮಂಗನಾಗಿ ಮಾಡಿ, 'ನೀನೇನು ಹೇಳುತ್ತಿದ್ದಿ ಅಂತಾದರೂ ಗೊತ್ತಾ ನಿನಗೆ' ಎಂದು ನಗುತ್ತಿದ್ದ. ಹೀಗೆ ಕಾಲೆಳೆಯುತ್ತ, ಬೀಳುತ್ತ ಪುರು ಮತ್ತು ಶೇಖರರಿಬ್ಬರೂ ಯಾವಾಗ ಒಳ್ಳೆಯ ಸ್ನೇಹಿತರಾದರೆಂದು ಅವರಿಗೇ ಗೊತ್ತಾಗಲಿಲ್ಲ.

ಪುರುವಿನಷ್ಟೇ ಪ್ರೀತಿಯವನಾಗಿ ಒಂದೊಂದು ದಿನದ ಹೋಟೆಲು ವಹಿವಾಟನ್ನು ಶೇಖರನೇ ನೋಡಿಕೊಳ್ಳುವಂತಾದ.

'ಇವತ್ತಿನ ಮಟ್ಟಿಗೆ ಹೋಟೆಲನ್ನು ನೀನೇ ನೋಡಿಕೋ, ಕುಟ್ಟಪ್ಪನೇನಾದರೂ ಹಾಲಿನ ದುಡ್ಡಿಗೆ ಬಂದರೆ ಇವತ್ತಿನ ವರೆಗಿನ ಹಾಲಿನ ದುಡ್ಡನ್ನು ಚುಕ್ತಾ ಮಾಡಿಬಿಡು' ಅಂತ ಗಲ್ಲೆಯ ಚಾವಿಯನ್ನೂ